ಅಸಲು ದಾವಾ ನಂ.276/2022
ಪಿ ಡಬ್ಲು-1

ದಿನಾಂಕಃ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ ಎಫ್ ಎನ್ ಎನ್ ವಕೀಲರಿಂದ.**

ನಾನು ಈ ದಾವೆಯನ್ನು ನಮ್ಮ ಆಸ್ತಿಯ ಸಂಬಂಧ ದಾಖಲು ಮಾಡಿರುತ್ತೇನೆ. ದಾವೆಯನ್ನು ಸಲ್ಲಿಸಲು ಯಾರು ಮಾಹಿತಿ ಕೊಟ್ಟಿಲ್ಲ. ದಾವೆಯಲ್ಲಿ ಏನು ಬರೆಯಲಾಗಿರುತ್ತದೆ ಎಂಬ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಸರ್ವೇ ನಂಬರ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ ಎಂಬ ಬಗ್ಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಚಕ್ಕುಬಂದಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಕ್ಷೇತ್ರ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 04 ಎಕರೆಯಲ್ಲಿ ಸ್ವಲ್ಪ ಕಡಿಮೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮೃತ ದಾವಲಸಾಬ, ಹಜರೇಸಾಬ, ನಜೀರಅಹ್ಮದ, ಬಾಬಾಜಾನ, ಮೊಹಮ್ಮದಗೌಸ, ಮುಸ್ತಾಕಅಹ್ಮದ, ಮನ್ನಾಬಿ, ಮಮತಾಜಬಿ ಇವರ ವಾರಸುದಾರರು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಗೇ ವಾರಸುದಾರರು ಎಂದು ತೋರಿಸಲು ಮರಣ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಮೃತ ಬಾಬಾಜಾನ ಈತನ ಕುಟುಂಬ ಉತ್ತರ ಜೀವಿತರ ಪ್ರಮಾಣ ಪತ್ರದ ಹೊರತು ಬೇರೆ ಯಾವ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಲಸಾಬ ತಂದೆ ರಾಜೇಸಾಬ ದರಗಾದ ಇವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಹಜರೇಸಾಬ, ನಜೀರಅಹ್ಮದ, ಬಾಬಾಜಾನ, ಮೊಹಮ್ಮದಗೌಸ, ಮುಸ್ತಾಕಅಹ್ಮದ, ಮನ್ನಾಬಿ, ಮಮತಾಜಬಿ ಇವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಹಾಗೇ ಹಾಜರುಪಡಿಸಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಲಸಾಬ ತಂದೆ ರಾಜೇಸಾಬ ದರಗಾದ ಇವರು ದಾವಾ ಆಸ್ತಿಗಳ ಸಾಮೂಹಿಕ ಕಬ್ಜೆದಾರರು ಇದ್ದರು ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳು ಮೂಲತಃ 1 ನೇ

ಪ್ರತಿವಾದಿಯ ಮೂಲ ಪುರಷ ಶಂಕರಭಟ್ಟ ನರಸಿಂಹ ಜೋಶಿ ಇವರ ಆಸ್ತಿಗಳು ಎಂದರೆ ಸರಿ. ಅವರಿಗೆ ನಾನು ಯಾವುದೇ ಸಂಬಂಧ ಹೊಂದಿಲ್ಲ ಮತ್ತು ನಾವು ಅವರಿಗೆ ವಾರಸುದಾರರು ಆಗುವುದಿಲ್ಲ ಎಂದರೆ ಸರಿ. ಆದ್ದರಿಂದ 1 ನೇ ಪ್ರತಿವಾದಿ ದಾವಾ ಆಸ್ತಿಗಳ ಮಾಲೀಕ ಮತ್ತು ಕಬ್ಜೆದಾರರು ಆಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾವು ಮಾಲೀಕರು ಆಗುತ್ತೇವೆ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ.

2. ಮೊಹಮ್ಮದಗೌಸ ದಾವಾಲಸಾಬ ದರಗಾದ ಇವರು ನನ್ನ ಮೈದುನ ಇರುತ್ತಾರೆ. ಅವರು ನಮ್ಮೊಂದಿಗೆ ತಮ್ಮ ಜೀವಿತ ಅವಧಿಯಲ್ಲಿ ವಾಸವಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಹೆಸರನ್ನು ವಾರಸು ನಾತೆಯಿಂದ ದಾಖಲು ಮಾಡಲು ಅರ್ಜಿ ಸಲ್ಲಿಸಿದಾಗ ಸದರಿ ನನ್ನ ಮೈದುನ ಅದಕ್ಕೆ ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಆಗ ತಹಶೀಲ್ದಾರ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಾಗಿ 1 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಯ ಪಹಣಿಯಲ್ಲಿ ದಾಖಲು ಆಗಲು ಆದೇಶ ಆಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಶಂಕರಶಾಸ್ತ್ರಿ ಜೋಶಿ ಇವರಿಗೆ ತಮ್ಮ ಕುಟುಂಬದಲ್ಲಿ ಆದ ಪಾಲು ವಿಭಾಗ ಡ ನಂಬರ 822 ರ ಪ್ರಕಾರ ಬಂದಿದ್ದು ಇತ್ತು ಎಂದರೆ ಸರಿಯಲ್ಲ. ಅವರು ತೀರಿಕೊಂಡ ನಂತರ 1 ನೇ ಪ್ರತಿವಾದಿಯ ಹೆಸರು ವಾರಸು ಪ್ರಕಾರ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎಷ್ಟು ಕಿಮ್ಮತ್ತಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.11/2 ಬಿ ಆಸ್ತಿಗೆ ಖರೀದಿ ಪತ್ರದ ಪ್ರಕಾರ 2 ನೇ ಪ್ರತಿವಾದಿಯ ಹೆಸರು ದಾಖಲು ಆಗಿರುತ್ತದೆ ಎಂದರೆ ಸಾಕ್ಷಿ ಅವರು ಹಾಗೇ ಹಚ್ಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಶಂಕರನಾರಾಯಣಭಟ್ಟ ಇವರಿಗೆ ಏನು ಸಂಬಂಧ ಹೊಂದಿಲ್ಲ ಎಂದು ಹೇಳಿ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.).

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).